ಆ) ವಿಧಾನಸಭಾ ಕ್ಷೇತ್ರ ಮತ್ತು ವರ್ಷವಾರು ವಿವರ ಈ ಕೆಳಕಂಡಂತಿದೆ.

ಕ್ರ ಸಂ	ವಿಧಾನಸಭಾ ಕ್ಷೇತ್ರ	2011–12ನೇ ಸಾಲಿಗೆ ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ	2012–13ನೇ ಸಾಲಿಗೆ ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ	2013–14ನೇ ಸಾಲಿಗೆ ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ
1	200–ಬೆಳ್ತಂಗಡಿ	19.00	134 8	44 55
2	201–ಮೂಡಬಿದ್ರ	16 50	83.72	125.5
3	202–ಮಂಗಳೂರು ನಗರ ಉತ್ತರ	18.50	113.00	64 00
4	203–ಮಂಗಳೂರು ನಗರ ದಕ್ಷಣ	19.79	91.5	48.00
5	204–ಮಂಗಳೂರು	21.27	114.00	156.50
6	205–ಬಂಟ್ವಾಳ	57.00	124 80	106.85
7	206–ಪುತ್ತೂರು	24.15	101.26	46.20
8	207–ಸುಳ್ಯ	24.09	80.51	45 82
	ಒಟ್ಟು	199.7	843.59	637.42

ಸರ್ವೆಯರ್‌ಗಳನ್ನು ನೇಮಿಸುವುದು

874 (1585); ಶ್ರೀ ಅನಿಲ್ ಲಾಡ್ (ಬಳ್ಳಾರಿ ನಗರ)

ಅ) ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೇವಲ 4 ಸರ್ವೆಯರ್‌ಗಳು ಕಾರ್ಯನಿರ್ವಹಿಸುತ್ತಿದ್ದು ಇದರಿಂದ ಕಾಮಗಾರಿಗಳು ಕುಂಠಿತವಾಗಿ ಸ್ಥಗಿತಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಕನಿಷ್ಟ 15 ಸರ್ವೆಯರ್‌ಗಳನ್ನು ನೇಮಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದೆಯೇ (ಸಂಪೂರ್ಣ ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಮತ್ತು (ಆ) ಆಯುಕ್ತರು, ಮಹಾನಗರ ಪಾಲಿಕೆ ಬಳ್ಳಾರಿ ಇವರಿಂದ ಸಿಬ್ಬಂದಿ ಕೋರಿ ಯಾವುದೇ ಪ್ರಸ್ತಾಪ ಬಂದಿರುವುದಿಲ್ಲ. ಬಳ್ಳಾರಿಯ

ನಗರಮಾಪನ ಕಚೇರಿಯಲ್ಲಿ ಪ್ರಸ್ತುತ 7 ಮಂದಿ ಭೂಮಾಪಕರನ್ನು ನೇಮಿಸಲಾಗಿದೆ. ಮಹಾನಗರ ಪಾಲಿಕೆಯಿಂದ ಕೋರಿಕೆ ಬಂದಲ್ಲಿ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಕಸ್ತೂರಿ ರಂಗನ್ ವರದಿ

875 (1274); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ಕೊಡಗು ಜಿಲ್ಲೆಯಲ್ಲಿ ಕಸ್ತೂರಿ ರಂಗನ್ ವರದಿಗೆ ಸೇರ್ಪಡೆಗೊಂಡ ಗ್ರಾಮಗಳ ಸಂಖ್ಯೆ ಎಷ್ಟು;

ಆ) ಯಾವ ಮಾನದಂಡದ ಮೇಲೆ ಸೇರ್ಪಡೆಗೊಳಿಸಲಾಗಿದೆ;

ಇ) ಕಸ್ತೂರಿ ರಂಗನ್ ವರದಿಯನ್ನು ಸರ್ಕಾರ ಕೈಬಿಡಲು ಕೈಗೊಂಡಿರುವ ಕ್ರಮವೇನು (ಪೂರ್ಣ ವಿವರ ನೀಡುವುದು)?

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಕಸ್ತೂರಿ ರಂಗನ್ ವರದಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿ 55 ಗ್ರಾಮಗಳ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತಿವೆ.

ಆ) ಯಾವುದೇ ಗ್ರಾಮದಲ್ಲಿ ಶೇಕಡ 20ರಷ್ಟು ಅಥವಾ ಅದಕ್ಕಿಂತ ಹೆಚ್ಚಿರುವ ನೈಸರ್ಗಿಕ ಭೂಭಾಗವನ್ನು (Natural Land Scape) ಪರಿಸರ ಸೂಕ್ಷ್ಮ ವಲಯದ ಗ್ರಾಮಗಳೆಂದು ಪರಿಗಣಿಸಲಾಗಿದೆ.

ಇ) ಕಸ್ತೂರಿ ರಂಗನ್ ಸಮಿತಿಯು ಕೇಂದ್ರ ಸರ್ಕಾರವು ರಚಿಸಿದ ಸಮಿತಿಯಾಗಿದ್ದು, ಇದರ ವರದಿಯನ್ನು ಕೈಬಿಡುವ ವಿಚಾರವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡಲಿದೆ. ಆದರೆ, ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಸಂಖ್ಯೆ: OS 733 (E) ದಿನಾಂಕ: 10–03–2014ರಂದು ಪಶ್ಚಿಮ ಘಟ್ಟಗಳಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳು ಎಂದು ಘೋಷಿಸಲು ಕರಡು ಅಧಿಸೂಚನೆ ಪ್ರಕಟಿಸಿ 60